**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**ಫೌಜದಾರಿ ಪ್ರಕರಣ ಸಂಖ್ಯೆಃ 784/2017**

**ಸರಕಾರದ ಪರವಾಗಿ ಃ ಅಬಕಾರಿ ಪೋಲೀಸ್ ಸೇಡಂ**

//ವಿರುದ್ಧ//

**ಆರೋಪಿ :** ಕಾಶಮ್ಮ ಗಂಡ ಕಾಶಪ್ಪಾ ಕಲಾಲ,
50 ವರ್ಷ, ಉಃ ಕೂಲಿ ಕೆಲಸ,
ವಾಸಃ ಕಾನಾಗಡ್ಡ, ತಾಃ ಸೇಡಂ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?

ಉಃ ಕೇಳಿರುತ್ತೇನೆ.

ಪ್ರಶ್ನೆ 2) ಚಾಸಾ.3/ಪ್ರಾಸಾ.1 ಮಹಾದೇವಪ್ಪ ತಂದೆ ರಾಮಚಂದ್ರ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ2011 ರಿಂದ 2012ನೆ ಸಾಲಿನಲ್ಲಿ ಸೇಡಂ ಅಬಕಾರಿ ವಲಯದಲ್ಲಿ ಅಬಕಾರಿ ರಕ್ಷಕ ಅಂತಾ ಸೇವೆ ಸಲ್ಲಿಸಿರುತ್ತೇನೆ. ಈ ಅವಧಿಯಲ್ಲಿ ದಿನಾಂಕ 23.11.2011ರಂದು ನಾನು ಕಚೇರಿಯಲ್ಲಿ ಇದ್ದಾಗ ನಮ್ಮ ಸಾಹೇಬರು ನನಗೆ ಮತ್ತು ನನ್ನ ಸಹೋದರ ಸಿಬ್ಬಂದಿ ನಾಗಪ್ಪ ಇವರಿಗೆ ಸೇಡಂ ತಾಲೂಕಿನ ಕಾನಾಗಡ್ಡಾ ಗ್ರಾಮದ ಮನೆಯಲ್ಲಿ ಕಾಶಮ್ಮ ಕಲಾಲ ಎಂಬುವವಳು ಅಕ್ರಮವಾಗಿ ಕಲಬೆರಕೆ ಸೇಂದಿ ತಯಾರಿಸಿರುವುದಾಗಿ ಮಾಹಿತಿ ಬಂದಿದ್ದು, ಅಬಕಾರಿ ದಾಳಿಯಲ್ಲಿ ಪಾಲ್ಗೊಳುವಂತೆ ಆದೇಶಿಸಿರುತ್ತಾರೆ. ಆಗ ನಾವೆಲ್ಲರೂ 01.00ಗಂಟೆಗೆ ಇಬ್ಬರೂ ಪಂಚರವನ್ನು ಕರೆದುಕೊಂಡು ಬಂದು 01.20 ಗಂಟೆಗೆ ಕಚೇರಿಯಿಂದ ಹೊರಟು 02.00 ಗಂಟೆಗೆ ಬಾತ್ಮಿ ಬಂದ ಸ್ಥಳಕ್ಕೆ ನಮ್ಮ ಸರಕಾರಿ ವಾಹನದ ಮೂಲಕ ಹೋಗಿರುತ್ತೇವೆ. ಆಗ ಒಬ್ಬ ಮಹಿಳೆ ನಮ್ಮನ್ನು ನೋಡಿ ಓಡಲು ಪ್ರಯತ್ನಿಸಿದ್ದು ನಾವು ಹಿಡಿಯಲು ಪ್ರಯತ್ನಿಸಿದಾಗ ಅವಳು ಸಿಕ್ಕಿರಲಿಲ್ಲ ಮನೆಯ ಒಳಗೆ ಹೋಗಿ ನೋಡಿದ್ದು ಮಂಚದ ಕೆಳಗೆ ಎರಡು ಪ್ಲಾಸ್ಟಿಕ ಗೊಬ್ಬರ ಚೀಲಗಳು ಇದ್ದವು, ಅವುಗಳನ್ನು ತೆಗೆದು ನೋಡಲು 1ಲೀ.ನ ಬಿಳಿಯ ಬಣ್ಣದ ದ್ರವ ತುಂಬಿದ ಪದಾರ್ಥಗಳು ಇದ್ದವು, ಆಗ ಬಿಚ್ಚಿ ನೋಡಲು ಕೆಟ್ಟ ಗಾಟು ವಾಸನೆ ಬಂದಿತ್ತು. ಚೀಲದಲ್ಲಿದ್ದ ಪಾಕೇಟನ್ನು ಎಣಿಸಿ ನೋಡಿದ್ದು ಅವು ಒಟ್ಟು ಒಂದು ಚೀಲದಲ್ಲಿ 40 ರಂತೆ 80 ಪಾಕೇಟುಗಳು ಇದ್ದವು. ಅದೇ ರೀತಿ ಒಂದು ಕಪಾಟನ್ನು ತೆರೆದು ನೋಡಲು ಅದರಲ್ಲಿ ಸಕ್ಕರೆ ಬಣ್ಣದ ಪದಾರ್ಥವಿತ್ತು, ಅದು ಸಹ ಕೆಟ್ಟ ಗಾಟು ವಾಸನೆಯಿಂದ ಕೂಡಿತು. ಆಗ ನಮಗೆ ಅದು ಕ್ಲೊರೋಹೈಡ್ರೆಟ್ ಎಂದು ಖಾತರಿಯಾಯಿತು, ಅದರ ತೂಕ 3 ಕೆ.ಜಿ. ಇತ್ತು. ದೊರೆತ ಸೇಂದಿ ಪಾಕೇಟುಗಳಿಂದ ಒಂದು ಪಾಕೇಟನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಅದನ್ನು ಬಿಳಿ ಬಣ್ಣದ ಬಟ್ಟೆಯಿಂದ ಸುತ್ತಿ ದಾರದಿಂದ ಹೊಲೆದು ಅರಗಿನಿಂದ ಶಿಲು ಮಾಡಿರುತ್ತೇವೆ. ಓಡಿ ಹೋದ ಮಹಿಳೆಯ ಹೆಸರು ಕಾಶಮ್ಮ ಗಂಡ ಕಾಶಪ್ಪ ಕಲಾಲ ಅಂತಾ ಗೊತ್ತಾಗಿರುತ್ತದೆ. ನಂತರ ಸ್ಥಳದಲ್ಲಿ ದೊರೆತ ಮು.ಮಾ.ಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ ನಮ್ಮ ಸಾಹೇಬರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ, ಪಂಚನಾಮೆಯನ್ನು ಅದೇ ದಿವಸ ಮಧ್ಯಾಹ್ನ 02.00ರಿಂದ 03.00ರವರೆಗೆ ಬರೆಯಲಾಗಿರುತ್ತದೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?

ಉಃ ಸುಳ್ಳು.

ಪ್ರಶ್ನೆ 3) ಚಾಸಾ.7/ಪ್ರಾಸಾ.3 ಪ್ರಭುಗೌಡ ತಂದೆ ಮಲ್ಲನ ಗೌಡ ಪಾಟೀಲ, ತಮ್ಮ ಸಾಕ್ಷ್ಯದಲ್ಲಿ ನಾನು 16-10-2009 ರಿಂದ 02-04-2012 ವರೆಗೂ ಸೇಡಂ ವಲಯದಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.23-11-2011 ರಂದು ನಾನು ಕಛೇರಿಯಲ್ಲಿದ್ದಾಗ ಮಧ್ಯಾಹ್ನ ಸಮಯ ಸುಮಾರು 01-00 ಗಂಟೆಗೆ ಕಾನಾಗಡ್ಡ ಗ್ರಾಮದಲ್ಲಿ ಆರೋಪಿತಳು ತನ್ನ ಮನೆಯಲ್ಲಿ ಅಕ್ರಮವಾಗಿ ಸೇಂದಿಯನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾಳೆ ಎಂದು ಖಚಿತ ಬಾತಮಿ ಬಂದ ಮೇರೆಗೆ , ಸದರಿ ಮಾಹಿತಿಯನ್ನು ನಮ್ಮ ಸಿಬ್ಬಂದಿಯವರಿಗೆ ತಿಳಿಸಿ ಪಂಚರನ್ನು ಬರಮಾಡಿಕೊಂಡು ಅವರಿಗೆ ನಮ್ಮ ಪರಿಚಯ ಮಾಡಿಕೊಂಡು ಬಂದ ಬಾತಿಮಿಯನ್ನು ತಿಳಿಸಿ ಸ್ಥಳೀಯರು ಪಂಚರಾಗಲು ಒಪ್ಪದಿದ್ದರೆ ನೀವು ಪಂಚನಾಮೆಯಲ್ಲಿ ಭಾಗಿಯಾಗಿ ಪಂಚನಾಮೆ ಮಾಡಿಕೊಡಲು ಕೇಳಿಕೊಂಡಿದ್ದು. ಸದರಿಯವರು ಒಪ್ಪಿ ಕೊಂಡಿರುವುದರಿಂದ ನಾನು ನಾಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಸರ್ಕಾರಿ ವಾಹನ ಸಂಖ್ಯೆ ಕೆ ಎ 32 ಜಿ 477 ಮುಖಾಂತರ ಘಟನಾ ಸ್ದಳಕ್ಕೆ ಮಧ್ಯಾಹ್ನ 02-00 ಗಂಟೆಗೆ ತಲುಪಿದಾಗ ನಮ್ಮನ್ನು ಸಮವಸ್ತ್ರದಲ್ಲಿ ನೋಡಿ ಮನೆಯಲ್ಲಿರುವ ಒಬ್ಬ ಮಹಿಳೆ ನಮ್ಮನುನ ನೋಡಿ ಅಲ್ಲಿಂದ ಓಡಿಹೋಗಿದ್ದು. ಹಿಡಿಯಲು ಪ್ರಯತ್ನಿಸಿದ್ದರೂ ಸಹ  ಸಿಗಲಿಲ್ಲ. ನಂತರ ಸಂಶಯಗೊಂಡು ಸದರಿ ಮನೆಯನ್ನು ತಪಾಸಣೆ ಮಾಡಲು ಸ್ದಳದಲ್ಲಿಯೇ ಕಲಂ 54 ರಂತೆ ಶೋಧನಾ ಪತ್ರವನ್ನು ತಯಾರಿಸಿ ಮನೆಯನ್ನು ಶೋಧನೆ ಮಾಡಲಾಗಿ, ಸದರಿ ಮನೆಯ ಮಂಚದ ಕೆಳಗಡೆ ಎರಡು ಪ್ಲಾಸ್ಟಕ್ ಗೊಬ್ಬರ ಚೀಲಗಳು ಇದ್ದವು. ಅವುಗಳನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ಬಿಳಿ ಬಣ್ಣದ ದ್ರವ ಪದಾರ್ಥ ಪ್ಲಾಸ್ಟಿಕ್ ಪಾಕೇಟುಗಳು ಇದ್ದವು ಅದನ್ನು ಎಣಿಸಿ ನೋಡಲಾಗಿ ಪ್ರತಿಯೊಂದು ಚೀಲದಲ್ಲಿ ತಲಾ 40 ಪಾಕೇಟುಗಳಂತೆ ಒಟ್ಟು 80 ಸೇಂದಿ ಪಾಕೇಟುಗಳು ಇದ್ದವು. ತದ ನಂತರ ಸದರಿ ಮು ಮಾ ನ್ನು ವಿವರವಾಗಿ ಪಂಚನಾಮೆಯನ್ನು ಮಾಡಿ ವಶಕ್ಕೆ ಪಡೆದುಕೊಂಡು ರಾಸಾಯನಿಕ ಪರೀಕ್ಷೆಗಾರಿ ಒಂದು ಲೀ. ಅಳತೆಉಳ್ಳ ಒಂದು ಪ್ಲಾಸ್ಟಿಕ್ ಬಾಟಲಿನಲ್ಲಿ ಹಾಕಿ ಅದನ್ನು ಸೀಲು ಮಾಡಲಾಯಿತು. ನಂತರ ನನ್ನ ಹಾಗು ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಲಾಯಿತು. ತದ ನಂತರ ಸದರಿ ಮನೆಯ ಕಪಾಟಿನಲ್ಲಿ ಒಂದು ಕರಿ ಬಣ್ಣದ ಪ್ಲಾಸ್ಟಿಕ್ ಕವರಿನಲ್ಲಿ ಅದರಲ್ಲಿ ಅಂದಾಜು 3 ಕಿ ಗ್ರಾ ನಷ್ಟು ಸಿ ಎಚ್ ಪೌಡರ್ ಇತ್ತು. ಅದನ್ನು ಸಹ ಜಪ್ತಿ ಪಡಿಸಿಕೊಂಡು ರಾಸಾಯನಿಕ ಪರೀಕ್ಷೆ ಕುರಿತು 50 ಗ್ರಾಂ ನಷ್ಟು ತೆಗೆದು ಚಿಕ್ಕ ಪ್ಲಾಸ್ಟಿಕ್ ಕವರ್ ನಲ್ಲಿ ತೆಗೆದು ಅದನ್ನು ಸೀಲು ಮಾಡಲಾಯಿತು. ಈ ಕುರಿತು ಸ್ದಳದಲ್ಲಿರುವ ಜನರಿಗೆ ವಿಚಾರಿಸಲಾಗಿ ಆರೋಪಿತರೊಂದಿಗೆ ಸಂಬಂದ ಕೆಟ್ಟು ಹೋಗುತ್ತೆ ಅಂತಾ ಯಾರು ಸಹ ಪಂಚನಾಮೆಗೆ ಸಹಕರಿಸಲಿಲ್ಲ. ಅದೇ ರೀತಿ ಓಡಿ ಹೋದ ಮಹಿಳೆ ಬಗ್ಗೆ ವಿಚಾರಿಸಲಾಗಿ ಅವಳ ಹೆಸರು ಕಾಶಮ್ಮ ಗಂಡ ಕಾಶಪ್ಪ ಕಲಾಲ್ ಎಂದು ತಿಳಿಸಿದರು ಹಾಗೂ ಅವಳು ಯಾವಾಗಲೂ ಇಲ್ಲಿಯೇ ಸೇಂದಿ ಮಾರಾಟ ಮಾಡುತ್ತಾಳೆ ಎಂದು ತಿಳಿಸಿದರು. ನಂತರ ಮು ಮಾ ಹಾಗೂ ಮಾದರಿಯನ್ನು ತೆಗೆದುಕೊಂಡು ಸ್ದಳದಲಿಯೇ ಮಧ್ಯಾಹ್ನ 02-00 ರಿಂದ 03-00 ಗಂಟೆಯ ವೆರಗೆ ಬರೆದು ಮುಗಿಸಲಾಯಿತು. ನಂತರ ಕಛೇರಿಗೆ ಬಂದು ಆರೋಪಿತರ ವಿರುದ್ದ ಪ್ರ ವ ವರದಿಯನ್ನು ದಾಖಲಿಸಿಕೊಂಡು ಸದರಿ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ  ಮು ಮಾನ್ನು ತನಿಖೆ ಮುಗಿಯುವ ವರೆಗೂ ನಮ್ಮ ತಾವೆಯಲ್ಲಿ ಇಟ್ಟು ಕೊಳ್ಳಲು ಮೇಲಧಿಕಾರಿಗಳಿಂದ ಪರವಾನಗಿಯನ್ನು ಪಡೆದುಕೊಂಡಿರುತ್ತೇನೆ. ಅದೇ ರೀತಿ ದಾಳಿಯಲ್ಲಿ ಭಾಗಿಯಾಗಿದ್ದ ಚಾ ಸಾ 3 ಮತ್ತು 4 ರವರ ಹೇಳಿಕೆಯನ್ನು ದಾಖಲಿಸಿರುತ್ತೇನೆ. ನಂತರ ಸದರಿ ಪ್ರಕರಣದಲ್ಲಿ ಜಪ್ತಿ ಪಡಿಸಿದ ಮಾದರಿಯನ್ನು ರಾಸಾಯನಿಕ ಪರೀಕ್ಷೆ ಕುರಿತು ಎಫ್  ಎಸ್ ಎಲ್  ಕಲಬುರಗಿಗೆ ಕಳುಹಿಸಿರುತ್ತೇನೆ. ದಿ.22-02-2012 ರಂದು ಚಾ ಸಾ 5 ರವರ ಮುಖಾಂತರ ಕಳುಹಿಸಿಕೊಟ್ಟೆನು. ದಿ.28-02-2012 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಸ್ವೀಕರಿಸಿಕೊಂಡು ಆರೋಪಿತರು ಸಾಕಷ್ಟು ಸಾಕ್ಷಾಧಾರ ಇರುವುದರಿಂದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ, ಎಂದು ನುಡಿಯುತ್ತಾರೆ,

ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 4) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?
ಉಃ

ಪ್ರಶ್ನೆ 5) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?
ಉಃ

(ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಂಡು ಆತನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಸಹಿ/-

ದಿನಾಂಕ ಃ 26-03-2026 ಪ್ರ.ದ. ನ್ಯಾ.ದಂ. ಸೇಡಂ.